# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರು ರವರ ಕಛೇರಿ, ಬಿ,ಬಿ,ಎಂ,ಪಿ ಕೇಂದ್ರ ಕಛೇರಿ ಆವರಣ, ಎಸ್. ಆರ್. ವೃತ್ತ, ಬೆಂಗಳೂರು**

ಸಂಖ್ಯೆ:ಆ.ಆ.ಶಾ/ಪಿ ಎಸ್.ಆರ್/4686/15-16 ದಿನಾಂಕ: 21-07-2015

## ಕಛೇರಿ ಆದೇಶ

**ವಿಷಯ:-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಖಾಲಿ ನಿವೇಶನಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡುವ ಕುರಿತು

**ಉಲ್ಲೇಖ:** ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ, ದಿನಾಂಕ: 16-07-2015 ರ ವಿಷಯದ ಸಂಖ್ಯೆ: 141/2015-16 ನಡವಳಿಗಳು

***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಘನತ್ಯಾಜ್ಯ ನಿರ್ವಹಣೆಯ ಕುರಿತು ಹಲವಾರು ಯೋಜನೆಗಳನ್ನು ಕೈಗೊಂಡಿದ್ದರೂ ಸಂಪೂರ್ಣವಾಗಿ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಿಸಲು ಸಾಧ್ಯವಾಗಿರುವುದಿಲ್ಲ. ಮನೆಮನೆಯಿಂದ ತ್ಯಾಜ್ಯ ಸಂಗ್ರಹಣೆ ಮಾಡಿದರೂ ಕೂಡ ಕೆಲವೊಂದು ಪ್ರದೇಶಗಳ ಖಾಲಿ ನಿವೇಶನಗಳಲ್ಲಿ ತ್ಯಾಜ್ಯ, ಕಟ್ಟಡ ಭಗ್ನಾವಶೇಷಗಳನ್ನು ಬಿಸಾಡಿರುವುದು ಕಂಡುಬಂದಿರುತ್ತದೆ. ಬಹುತೇಕವಾಗಿ ಇಂತಹ ನಿವೇಶನಗಳು ಗಿಡಗಂಟೆಗಳಿಂದ ಕೂಡಿ ನಿವೇಶನದ ಮಾಲೀಕರ ನಿರ್ಲಕ್ಷ್ಯದಿಂದ ಚಿಕ್ಕ ತ್ಯಾಜ್ಯ ಶೇಖರಣಾ ಸ್ಥಳಗಳಾಗಿ ಬದಲಾವಣೆಗೊಳ್ಳುತ್ತಿದೆ. ಖಾಲಿ ನಿವೇಶನಗಳ ಮಾಲೀಕರು ನಿವೇಶನಗಳನ್ನು ಸ್ವಚ್ಛವಾಗಿಡದೇ ತ್ಯಾಜ್ಯವನ್ನು ಸಂಗ್ರಹಗೊಳ್ಳುತ್ತಿರುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ತೊಂದರೆ ಹಾಗೂ ನಗರ ಸೌಂದರ್ಯಕ್ಕೆ ಕೂಡ ಹಾನಿ ಉಂಟಾಗುತ್ತಿರುತ್ತದೆ. ಇಂತಹ ಖಾಲಿ ನಿವೇಶನಗಳನ್ನು ಗುರುತಿಸಿ ಸದರಿ ನಿವೇಶನಗಳ ಮಾಲೀಕರ ಮೇಲೆ ಸೂಕ್ತ ಕ್ರಮಕೈಗೊಳ್ಳುವ ಅವಶ್ಯವಿರುತ್ತದೆ. ಅದರಂತೆ ಖಾಲಿ ನಿವೇಶನಗಳ ಸ್ವಚ್ಛತೆ ಕಾಪಾಡಲು ಈ ಹಿಂದೆ ಸುತ್ತೋಲೆ ಸಂಖ್ಯೆ: ಉ.ಆ(ಕಂ)ಪಿ.ಆರ್/112/02-03, ದಿನಾಂಕ: 07-01-2003ರಲ್ಲಿ ಹಾಗೂ ಸುತ್ತೋಲೆ ಸಂಖ್ಯೆ: ಉ.ಆ(ಕಂ)ಪಿ.ಆರ್/296/10-11, ದಿನಾಂಕ: 07-06-2010 ರಲ್ಲಿ ಹೊರಡಿಸಲಾಗಿದ್ದರೂ ಸಹ ಸಮರ್ಪಕವಾಗಿ ಅನುಷ್ಠಾನಗೊಳಿಸಿರುವುದಿಲ್ಲ.

ಆದುದರಿಂದ ಖಾಲಿ ನಿವೇಶನಗಳಲ್ಲಿ ಸ್ವಚ್ಛತೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ನಿಯಮ 463 ರ ಅಡಿಯಲ್ಲಿ ಹಾಗೂ ನಿಯಮ 256 ಮತ್ತು 257ರ ಅನ್ವಯ ಕಸ ಮತ್ತು ಹೊಲಸಿನ ಶೇಖರಣೆ ಬಗ್ಗೆ ಆಯುಕ್ತರು ರವರು ಸಾರ್ವಜನಿಕ ನೋಟೀಸ್‌ನ ಮೂಲಕ ನೋಟೀಸ್‌ನಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಬೀದಿ ಅಥವಾ ಆವರಣದಲ್ಲಿ ರಾಶಿಗೂಡುವ ಎಲ್ಲಾ ಕಸ ಮತ್ತು ಹೊಲಸನ್ನು ಅಂತಹ ಆವರಣದ ಮಾಲೀಕರು ಸಂಗ್ರಹಿಸಿ ಶೇಖರಿಸಿ ಸಾಗಿಸಲು ನೋಟೀಸ್‌ನಲ್ಲಿ ಅಗತ್ಯ ಪಡಿಸಬಹುದಾಗಿದ್ದು, ಅಥವಾ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ ತರುವಾಯ ಅಂತಹ ಆವರಣದಲ್ಲಿ ರಾಶಿಗೂಡಿದ ಎಲ್ಲಾ ಕಸ ಮತ್ತು ಹೊಲಸನ್ನು ತೆಗೆದು ಹಾಕುವುದಕ್ಕಾಗಿ ನಿವೇಶನದ ಮಾಲೀಕರಿಗೆ ಸ್ಥಾಯಿ ಸಮಿತಿ ಮಂಜೂರಾತಿಯೊಂದಿಗೆ ನಿಯತಕಾಲಿಕ ಶುಲ್ಕವನ್ನು ವಿಧಿಸಬಹುದಾಗಿರುತ್ತದೆ.

ಸದರಿ ಅಧಿಕಾರವನ್ನು ವಲಯಗಳ ಆಯಾ ವಾರ್ಡಿನ ಸಹಾಯಕ ಅಭಿಯಂತರರು, ಆರೋಗ್ಯ ಪರಿವೀಕ್ಷಕರಿಗೆ ಅಧಿಕಾರ ಪ್ರತಿನಿಯೋಜನೆ ನೀಡಿ, ಖಾಲಿ ನಿವೇಶನದ ಮಾಲೀಕರು ನಿವೇಶನದ ಸ್ವಚ್ಚತೆಯನ್ನು ಕಾಪಾಡುವಲ್ಲಿ ವಿಫಲರಾದಲ್ಲಿ ಅಂತಹ ಮಾಲೀಕರಿಗೆ ಒಂದು ವಾರದೊಳಗೆ ಸ್ವಚ್ಚಗೊಳಿಸುವಂತೆ ನೋಟೀಸ್ ಜಾರಿ ಮಾಡುವುದು. ಮಾಲೀಕರ ವಿಳಾಸ ಗುರುತಿಸಲಾಗದ ಸಂದರ್ಭದಲ್ಲಿ ನಿವೇಶನದಲ್ಲಿ ನೋಟೀಸ್ ಜಾರಿಗೊಳಿಸಿರುವ ಫಲಕವನ್ನು ಪ್ರದರ್ಶಿಸುವುದು. ಒಂದು ವಾರದ ಕಾಲಾಮಿತಿಯಲ್ಲಿ ಸ್ವಚ್ಚಗೊಳಿಸದೇ ಇರುವ ಸಂದರ್ಭದಲ್ಲಿ ಆ ನಿವೇಶನದಲ್ಲಿರುವ ಗಿಡಗಂಟೆಗಳನ್ನು ಕಿತ್ತು ಹಾಕಿ ಅಲ್ಲಿ ಶೇಖರಿಸಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಸದರಿ ಕಾರ್ಯವನ್ನು ಕೈಗೊಳ್ಳುವ ಸಂಧರ್ಬಗಳಲ್ಲಿ ಅಗತ್ಯವಾದ ಮಾರ್ಗಸೂಚಿಗಳು ಮತ್ತು ಚಾಲ್ತಿಯಲ್ಲಿರುವ ಘನತ್ಯಾಜ್ಯ ನಿರ್ವಹಣೆಯ ಟೆಂಡರ್ ಷರತ್ತುಗಳನ್ನು ಪಾಲಿಸತಕ್ಕದ್ದು. ಸದರಿ ಕಾರ್ಯನಿರ್ವಹಿಸಿರುವುದಕ್ಕೆ ನಿಖರ ದಾಖಲಾತಿಗಳನ್ನು (ಛಾಯಾಚಿತ್ರಗಳು) ಹೊಂದಿರಬೇಕು. ಇಂತಹ ಸ್ವಚ್ಚತೆ ಮತ್ತು ವಿಲೇವಾರಿಗಾಗಿ ಪ್ರತಿ ಚ. ಅಡಿ ಗೆ ರೂ.2.00 ಶುಲ್ಕವನ್ನು ವಿಧಿಸುವುದು. ಸ್ವಚ್ಚತೆ ಕೈಗೊಂಡು ನಿವೇಶನಗಳನ್ನು ನಿಯತಕಾಲಿಕ ಪರಿವೀಕ್ಷಿಸಿ ಪುನಃ ಆ ಸ್ವತ್ತುಗಳಲ್ಲಿ ತ್ಯಾಜ್ಯ ಶೇಖರಣೆಗೊಂಡಿದಲ್ಲಿ ಪುನಃ ಸ್ವಚ್ಛಗೊಳಿಸಿ ರೂ.2.00 ಚ. ಅಡಿಗೆ ಶುಲ್ಕ ವಿಧಿಸುವುದು. ಸದರಿ ಮೊತ್ತವನ್ನು ಮಾಲಿಕರು ಸಂದಾಯ ಮಾಡದೇ ಇದ್ದ ಪಕ್ಷದಲ್ಲಿ ಆಸ್ತಿ ತೆರಿಗೆ ಮೂಲಕ ವಸೂಲಿ ಮಾಡಲು ಆಯಾ ವಾರ್ಡ್‌ನ ಕಂದಾಯ ಅಧಿಕಾರಿಗಳಿಗೆ ಸೂಚಿಸುವುದು. ಕಂದಾಯ ಅಧಿಕಾರಿಗಳು ಸದರಿ ಮೊತ್ತವನ್ನು ಆಸ್ತಿ ತೆರಿಗೆ ಮೂಲಕ ವಸೂಲಿ ಮಾಡುವಂತೆ ಆದೇಶಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ,
ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು (ಪೂರ್ವ, ಪಶ್ಚಿಮ, ದಕ್ಷಿಣ, ಆರ್.ಆರ್ ನಗರ, ದಾಸರಹಳ್ಳಿ, ಬೊಮ್ಮನಹಳ್ಳಿ, ಮಹದೇವಪುರ ಮತ್ತು ಯಲಹಂಕ)

ಪ್ರತಿಯನ್ನು,

- ಮಾನ್ಯ ಆಡಳಿತಾಗಾರರ ಗಮನಕ್ಕೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
- ವಿಶೇಷ ಆಯುಕ್ತರು (ಘ.ತ್ಯಾ.ನಿ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
- ಜಂಟಿ ಆಯುಕ್ತರು (ಆ & ಘ.ತ್ಯಾ.ನಿ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
- ಕಛೇರಿ ಪ್ರತಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಅಪರ/ಜಂಟಿ ಆಯುಕ್ತರು ರವರ ಕಛೇರಿ,
_________ ವಲಯ,
ಬೆಂಗಳೂರು, ದಿನಾಂಕ: ______.

ಕೆಎಂಸಿ ಕಾಯ್ದೆ ಕಲಂ 257ರಡಿ ಹೊರಡಿಸಿದ ನೋಟೀಸು

ಗೆ,
ಸ್ವತ್ತಿನ ಮಾಲೀಕರು,
______________
______________

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: _____ ಸ್ವತ್ತಿನ/ಪಿ.ಐ.ಡಿ ಸಂಖ್ಯೆ: _____ ಬೆಂಗಳೂರು, ಖಾಲಿ ಸ್ವತ್ತಿನಲ್ಲಿ ಕಟ್ಟಡ ಭಗ್ನಾವಶೇಷಗಳನ್ನು/ಗಿಡಗಂಟೆ/ಕಸ ಇನ್ನಿತರೇ ಅನುಪಯುಕ್ತ ವಸ್ತುಗಳು ಮತ್ತು ಗಲೀಜು ಶೇಖರಣೆಯಾಗಿದ್ದು/ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುವಂತೆ ಬೇಲಿ ಬೆಳೆದಿರುವುದು ದಿನಾಂಕ: ___ರ ಸ್ಥಳ ಪರಿವೀಕ್ಷಣೆಯಿಂದ ದೃಢಪಟ್ಟಿದೆ.

ಮೇಲ್ಕಂಡ ಉಲ್ಲಂಘನೆಯಿಂದ ನಗರದಲ್ಲಿ ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗಿರುತ್ತದೆ. ಈ ರೀತಿಯ ನಡುವಳಿಕೆ ಕೆಎಂಸಿ ಕಾಯ್ದೆಯ ಕಲಂ 257ರಡಿ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ತಮ್ಮ ವಿರುದ್ಧ ಕೆಎಂಸಿ ಕಾಯ್ದೆ ಕಲಂ 431 ರಡಿಯಲ್ಲಿ ದಂಡವನ್ನು ವಿಧಿಸಲು ಹಾಗೂ ಕ್ರಿಮಿನಲ್ ಸ್ವರೂಪದ ದೂರನ್ನು ನೀಡಬಹುದಾಗಿದೆ.

<u>ಮೇಲಿನ ಅಡೆತಡೆಯನ್ನು ಈ ನೋಟೀಸು ತಲುಪಿದ 3 ದಿನಗಳೊಳಗಾಗಿ ತೆರವುಗೊಳಿಸುವುದು. ತಪ್ಪಿದಲ್ಲಿ ಸೂಕ್ತ ದೂರನ್ನು ದಾಖಲಿಸುವುದಲ್ಲದೆ ನಿವೇಶನವನ್ನು ಪಾಲಿಕೆ ವತಿಯಿಂದ ಸ್ವಚ್ಛಗೊಳಿಸಲಾಗುವುದು. ಇದರ ಬಾಬ್ತು ಕಲಂ 257(2)ರಡಿ ನಿಗದಿಪಡಿಸಿದ ಶುಲ್ಕವಾದ ನಿವೇಶನದ ವಿಸ್ತೀರ್ಣಕ್ಕೆ ಪ್ರತಿ ಚದರ ಅಡಿಗೆ ರೂ.2.00 ರಂತೆ ತೆರವು ಖರ್ಚಿನ ಹಣವನ್ನು ಒಂದು ವಾರದೊಳಗಾಗಿ ಆಯುಕ್ತರು, ಬಿಬಿಎಂಪಿ ರವರ ಖಾತೆಗೆ ಸಂದಾಯ ಮಾಡಿದ ರಶೀದಿ ನೀಡತಕ್ಕದ್ದು.</u>

<u>ತಪ್ಪಿದಲ್ಲಿ ಸದರಿ ಮೊತ್ತವನ್ನು ಕಲಂ 470ರಡಿ ನಿಮ್ಮಿಂದ ವಸೂಲಾಗುವ ಆಸ್ತಿ ತೆರಿಗೆ ಹಣದಲ್ಲಿ ಹೆಚ್ಚುವರಿಯಾಗಿ ಸೇರಿಸಿ ನಿಮ್ಮಿಂದ ವಸೂಲಿ ಮಾಡಲು ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.</u>

ಜಂಟಿ ಆಯುಕ್ತರು ( ) ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಅಪರ/ಜಂಟಿ ಆಯುಕ್ತರು ರವರ ಕಛೇರಿ,
_________ ವಲಯ,
ಬೆಂಗಳೂರು, ದಿನಾಂಕ: _____.

ಗೆ,

ಸ್ವತ್ತಿನ ಮಾಲೀಕರು,
________________
________________

## ಕೆಎಂಸಿ ಕಾಯ್ದೆ ಕಲಂ 257 ರಡಿ ಹೊರಡಿಸಿದ ಆದೇಶ

ಉಲ್ಲೇಖ: ಈ ಕಛೇರಿಯಿಂದ ಕೆ.ಎಂ.ಸಿ. ಕಾಯ್ದೆ ಕಲಂ 257ರಡಿ ದಿನಾಂಕ ___ ರ ನೋಟೀಸು

* * * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:____ ಸ್ವತ್ತಿನ/ಪಿ.ಐ.ಡಿ. ಸಂಖ್ಯೆ: ____ ಬೆಂಗಳೂರು. ಖಾಲಿ/ಸ್ವತ್ತಿನಲ್ಲಿ ಕಟ್ಟಡ ಭಗ್ನಾವಶೇಷಗಳನ್ನು/ಗಿಡಗಂಟೆ/ಕಸ ಮತ್ತು ಹೊಲಸಿನ ಶೇಖರಣೆಯನ್ನು ಮಾಡಿದ್ದು/ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುವಂತೆ ಬೇಲಿ ಬೆಳೆಸಿರುವುದು/ಶೇಖರಣೆಗೊಂಡಿರುವುದು ಸ್ಥಳ ಪರಿವೀಕ್ಷಣೆಯಿಂದ ದೃಢಪಟ್ಟಿರುತ್ತದೆ.

ಈಗಾಗಲೇ ಈ ಕಛೇರಿಯ ನೋಟೀಸು ದಿನಾಂಕ:____ರಂತೆ ಮೇಲ್ಕಂಡ ಸ್ವರೂಪದ ಅಡೆತಡೆಯನ್ನು 3 ದಿನಗಳೊಳಗಾಗಿ ತೆರವುಗೊಳಿಸಲು ಸೂಚಿಸಲಾಗಿಯೂ ತಾವು ಯಾವುದೇ ರೀತಿಯ ಕ್ರಮಕೈಗೊಂಡಿರುವುದಿಲ್ಲ.

ಮೇಲ್ಕಂಡ ಉಲ್ಲಂಘನೆಯಿಂದ ನಗರ ಸೌಂದರ್ಯ ಹಾಳಾಗುವುದರೊಂದಿಗೆ ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗಿರುತ್ತದೆ. ಈ ರೀತಿಯ ಉಲ್ಲಂಘನೆಯು ಕೆಎಂಸಿ ಕಾಯ್ದೆ ಕಲಂ 257ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ಮೇಲಿನ ಕಾನೂನು ಬಾಹೀರ ಅಡೆತಡೆಗಳನ್ನು ತೆರವುಗೊಳಿಸಲು ವಿಫಲವಾಗಿರುವುದಾಗಿ ದೃಢಪಟ್ಟಿರುತ್ತದೆ.

## ಆದೇಶ

ಮೇಲಿನ ಅಡೆತಡೆಯನ್ನು ತೆರವುಗೊಳಿಸಲು ವಿಫಲರಾಗಿರುವ ನಿಮ್ಮ ವಿರುದ್ಧ ಕೆಎಂಸಿ ಕಾಯ್ದೆ ಅಡಿ ಆಯುಕ್ತರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಅಡೆತಡೆಯನ್ನು ಪಾಲಿಕೆಯು ತೆರವುಗೊಳಿಸಲು ಪಾಲಿಕೆಗೆ ತಗುಲಿದ ಖರ್ಚನ್ನು ಕಲಂ 257(2)ರಡಿ ನಿಗದಿಪಡಿಸಿದ ಶುಲ್ಕವಾದ ನಿವೇಶನದ ವಿಸ್ತೀರ್ಣಕ್ಕೆ ಪ್ರತಿ ಚದರ ಅಡಿಗೆ ರೂ.2 ರಂತೆ ಒಟ್ಟು ರೂ. ____/- ಗಳ ಶುಲ್ಕವನ್ನು ವಸೂಲಿ ಮಾಡಲು ____ ವಿಭಾಗದ ಕಂದಾಯ ಅಧಿಕಾರಿಗೆ ನಿರ್ದೇಶಿಸಿದೆ.

ಜಂಟಿ ಆಯುಕ್ತರು (          ) ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಪ್ರತಿಯನ್ನು: ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಸಂಬಂಧಪಟ್ಟ ಅಭಿಯಂತರರಿಗೆ ಸ್ವತ್ತಿನ ಮಾಲೀಕರ ವಿರುದ್ಧ ದೂರು ದಾಖಲಿಸಲು ಕಳುಹಿಸಿದೆ.

1923/09

ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ ಕೋಶ)

ಸಿಆಸುಇ 115 ಆರ್‌ಟಿಐ 2009

ಕರ್ನಾಟಕ ಸರ್ಕಾರದ ಸಚಿವಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
ದಿನಾಂಕ: 03-08-2009

## ಸುತ್ತೋಲೆ

ವಿಷಯ:- ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಧೃಡೀಕೃತ ಪ್ರತಿ ನೀಡುವ ಬಗ್ಗೆ.

- - -

ದಿನಾಂಕ 27-06-2009ರಂದು ಮಾಹಿತಿ ಹಕ್ಕು ಅಧಿನಿಯಮ 2005ರ ಸಮಗ್ರ ಅನುಷ್ಠಾನ ಕುರಿತಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕ್ರಿಯಾಕಟ್ಟೆಯ ಪದಾಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಸಂಘದ ಪದಾಧಿಕಾರಿಗಳು, ಮಾಹಿತಿ ಹಕ್ಕು ಅಧಿನಿಯಮ 2005ರಡಿಯಲ್ಲಿ ಮಾಹಿತಿ ಕೋರಿರುವ ಅರ್ಜಿಗಳಿಗೆ ಮಾಹಿತಿಯನ್ನು ನೀಡುವಾಗ ಕೆಲವು ಸಾರ್ವಜನಿಕ ಮಾಹಿತಿ ಅಧಿಕಾರಿಗಳು "ಈ ಪ್ರತಿಯನ್ನು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ನೀಡಲಾಗಿದ್ದು ಇತರೆ ಯಾವುದೇ ದಾಖಲಾತಿಗೆ ಬಳಸತಕ್ಕದ್ದಲ್ಲ" ಹಾಗೂ "Certified Copy under RTI Act" ಎಂದು ಧೃಡೀಕರಿಸಿ ನೀಡಿರುವುದನ್ನು ಹಾಗೂ ಧೃಡೀಕೃತ ಪ್ರತಿಗಳ ಮೇಲೆ ಹಲವಾರು ಸಲ ಮೊಹರನ್ನು ಒತ್ತಿ ಧೃಡೀಕೃತ ಪ್ರತಿಯನ್ನು ವಿರೂಪಗೊಳಿಸಿರುವುದನ್ನು ಸಭೆಯ ಗಮನಕ್ಕೆ ತಂದಿರುವರು.

ಇನ್ನುಮುಂದೆ ಸಾರ್ವಜನಿಕರು ಮಾಹಿತಿ ಹಕ್ಕು ಅಧಿನಿಯಮ 2005ರಡಿಯಲ್ಲಿ ಮಾಹಿತಿ ಕೋರಿ ಸಲ್ಲಿಸಿದ ಅರ್ಜಿಗಳಿಗೆ ಮಾಹಿತಿ ನೀಡುವಾಗ ಮಾಹಿತಿಯು ಪಾರದರ್ಶಕವಾಗಿರತಕ್ಕದ್ದೆಂದು ಮತ್ತು ಧೃಡೀಕೃತ ಪ್ರತಿಗಳನ್ನು ಸಾಮಾನ್ಯ ಕಚೇರಿ ಮೊಹರಿನ ಮೂಲಕವೇ ಧೃಡೀಕರಿಸತಕ್ಕದ್ದೆಂದು ತಮ್ಮ ಆಡಳಿತಾಧೀನಕ್ಕೊಳಪಡುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳಿಗೆ, ಇಲಾಖಾ ಮುಖ್ಯಸ್ಥರುಗಳಿಗೆ, ನಿಗಮ/ಮಂಡಳಿಗಳಿಗೆ, ಸರ್ಕಾರಿ ಸ್ವಾಮ್ಯದ ಸಂಘ/ಸಂಸ್ಥೆಗಳಿಗೆ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಸೂಚಿಸಲಾಗಿದೆ.

(ಬಿ. ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಜನಸ್ಪಂದನ ಕೋಶ-ಮಾಹಿತಿ ಹಕ್ಕು)

ಗೆ,
ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.

..2/-